ಅಧ್ಯಕ್ಷರು:- ವರದಿಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಹಕ್ಕುಚ್ಯುತಿ ನಿರ್ಣಯ

''ಮೈಸೂರಿನಲ್ಲಿ 8.12.92ರಂದು ನಡೆದಂತಹ ಹಿಂದೂ ಮುಸ್ಲಿಂ ಗಲಭೆಗೆ ಮಾನ್ಯ ಆಜೀಜ್ ಸೇಠ್ ಜವಾಬ್ದಾರರು ಎಂದು ಜನರು ಹೇಳುತ್ತಿರುವುದರಿಂದ ತನಿಖೆ'' ಮಾಡುವ ಬಗ್ಗೆ.

ಅಧ್ಯಕ್ಷರು:- ಈ ಸಭೆಯ ಮಾನ್ಯ ಸದಸ್ಯರಾದ ಶ್ರೀ ಆಜೀಜ್ ಸೇಠ್‌ರವರು ನಿಯಮ 191ರ ಮೇರೆಗೆ ಒಂದು ಹಕ್ಕುಚ್ಯುತಿ ಸೂಚನೆ ಬಗ್ಗೆ ತಿಳುವಳಿಕೆಯನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅದರ ಬಗ್ಗೆ ನಾನು ಮಾನ್ಯ ಸದಸ್ಯರಾದಂತ ಶ್ರೀ ಬಿ.ಎಸ್. ಯಡಿಯೂರಪ್ಪನವರಿಗೆ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬಂದಿರತಕ್ಕಂತ ಸುದ್ದಿ ತಾವು ಹೇಳಿರತಕ್ಕಂಥಾದ್ದೆ ಇಲ್ಲವೇ ಅದರ ಬಗ್ಗೆ ವಿವರಣೆ ಕೊಡಬೇಕೆಂದು ಅವರನ್ನು ಕೇಳಿದಾಗ ಅವರು ಈ ಕೆಳಕಂಡ ಪತ್ರವನ್ನು ನನಗೆ ಕಳುಹಿಸಿದ್ದಾರೆ.

> '' ಮಾನ್ಯರೇ, ಮಾನ್ಯ ಆಜೀಜ್ ಸೇಠ್‌ರವರು ನಿಯಮ 191ರ ಮೇರೆಗೆ ನೀಡಿರುವ ಹಕ್ಕುಚ್ಯುತಿ ಸೂಚನೆ ಬಗ್ಗೆ ತಾವು ಕೇಳಿರುವ ವಿವರಣೆಯನ್ನು ಈ ಕೆಳಕಂಡಂತೆ ನೀಡಬಯಸುತ್ತೇನೆ. ಮೈಸೂರಿನಲ್ಲಿ ಇತ್ತೀಚೆಗೆ ನಡೆದ ಗಲಭೆಗೆ ಮಾನ್ಯ ಆಜೀಜ್ ಸೇಠ್‌ರವರು ಜವಾಬ್ದಾರರು ಎಂದು ಜನರು ಹೇಳುತ್ತಿರುವುದರಿಂದ ಇದರ ಬಗ್ಗೆ ತನಿಖೆ ಆಗಬೇಕೆಂದು 8.12.92ರಂದು ಮೈಸೂರಿನಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಹೇಳಿದ್ದೇನೆಯೇ ಹೊರತು, ಮಾನ್ಯ ಆಜೀಜ್ ಸೇಠ್‌ರವರು ಜವಾಬ್ದಾರರು ಎಂದು ವೈಯಕ್ತಿಕವಾಗಿ ಹೇಳಿಲ್ಲ. ದಿನಾಂಕ 8.12.92ರ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ವರದಿಯಾಗಿರುವುದು ಸರಿಯಲ್ಲ ಇದನ್ನು ಸದನದಲ್ಲಿ ಈ ಬಗ್ಗೆ ಸ್ಪಷ್ಟಪಡಿಸಿದ್ದೇನೆ.''

ಈ ವಿವರಣೆ ಬಂದ ಮೇಲೆ ಹಕ್ಕುಚ್ಯುತಿ ಸೂಚನೆ....

SRI AZEEZ SAIT: Mr.Speaker Sir, it is not only in one paper, in other paper also, the hon'ble member has categorically stated that he has enough of evidence to prove it on the floor of this House. Earlier he has made a statement when the Hon'ble Deputy Speaker has asked him, whether he would deny it or not, he said 'I don't deny'. That was the first question. The chair can take out the proceedings of this House. He has categorically said that he is not going to deny. Later on, when he understood the consequence of the Privilege Motion, he has changed his wordings in the very same House. Even that is in the record. He has not said it; ie., since somebody told him, he has stated it. I have given enough of evidence to the paper. He has also stated that the Home Secretary had made a statement saying that some invisible hands are there. When he had told my name, the Home Secretary has said, it is not fair to bring his name. Even that is there. I don't think any more evidence is required. So, the Hon'ble Member has to prove it on the Floor of the House or he has to apologise for the act because at this age I cannot have black trademark on my face. I have been a public servant for the last 46 years and nobody has said that I am involved in such things, and it is clear-cut. It has pained me and it has humiliated me. Moreover, his own colleague Sri Maruthi Rao Pawar, to cover his

shadow he has come out with a statment and submitted yesterday. He has made the same categorical statement.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಸಭಾಧ್ಯಕ್ಷರೆ, ಮೂಲಭೂತವಾಗಿ ತಾವು ತೀರ್ಪು ಕೊಡುವುದಕ್ಕೆ ಮುಂಚಿತವಾಗಿ ನಾನು ಇನ್ನೂ ಒಂದೆರಡು ವಿಚಾರಗಳ ಬಗ್ಗೆ ತಮ್ಮ ಗಮನವನ್ನು ಸೆಳೆಯಬೇಕಾಗುತ್ತದೆ. ಇದು ಸದನದಲ್ಲಿ ನಡೆದಿರತಕ್ಕ ಚರ್ಚೆಯಲ್ಲ. ಹೊರಗಡೆ ನಡೆದಿರತಕ್ಕ ಚರ್ಚೆಯಾಗಿದೆ. ಆದ್ದರಿಂದ ಈ ಚರ್ಚೆಗೂ ಮತ್ತು ಸದನಕ್ಕೂ ಏನು ಸಂಬಂಧ ಇದೆ? ಇದು ಹೊರಗಡೆ ಹೇಳಿರತಕ್ಕದ್ದು. ಮಾನ್ಯ ಯಡಿಯೂರಪ್ಪನವರು ಯಾರ ಯಾರ ಬಗ್ಗೆಯೋ, ಎಲ್ಲೆಲ್ಲೊ ರಸ್ತೆಯಲ್ಲಿ ಏನೇನೋ ಮಾತನಾಡಿದರೆಂದು ನಾವು ಇಲ್ಲಿ ಹಕ್ಕುಚ್ಯುತಿಯನ್ನು ತರುವುದಾದರೆ ಇದರ ಅರ್ಥವೇನು? ಹಾಗಾದರೆ ರಸ್ತೆಯಲ್ಲಿ ಯಾರ್ಯಾರೋ ಮಾತನಾಡುತ್ತಾರೆಂದು ಪತ್ರಿಕೆಯಲ್ಲಿ ಏನೇನೋ ಬರುತ್ತದೆ ಅದನ್ನೆಲ್ಲಾ ನಾವು ಇಲ್ಲಿ ಹಕ್ಕುಚ್ಯುತಿ ಎಂದು ತರುವುದಾದರೆ ಈ ಸದನ ಇಡೀ ವರ್ಷ ನಡೆಯಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ:- ಮಾನ್ಯ ಸಭಾಧ್ಯಕ್ಷರೆ....

ಅಧ್ಯಕ್ಷರು:- ನಾನು ನಿಮ್ಮ ಅಸಿಸ್ಟನ್ಸ್‌ನ್ನು ಕೇಳಲಿಲ್ಲ.

ಶ್ರೀ ಸಿ. ಬೈರೇಗೌಡ:- ತಾವು ನಮ್ಮ ಅಸಿಸ್ಟನ್ಸ್ ಕೇಳಲಿಲ್ಲ. ಅದನ್ನು ಒಪ್ಪಿಕೊಳ್ಳುತ್ತೇವೆ ಆದರೆ ನಮಗೆ ಈ ಅನುಮಾನ ಇದೆ. ಏಕೆಂದರೆ ಈ ಸರ್ಕಾರದ ಜೊತೆ ಏನೇನೋ ಅನೇಕ ವಿಚಾರಗಳು ನಡೆಯುತ್ತಿರುತ್ತವೆ. ಅನೇಕಾನೇಕ ಸ್ಕ್ಯಾಂಡಲ್ಸ್ ನಡೆಯುತ್ತಿರುತ್ತವೆ. ಅದರ ಬಗ್ಗೆ ನಾವು ಮಾತನಾಡುತ್ತೇವೆ. ಇಂಥ ಕಡೆ ಈ ರೀತಿ ಆಗಿದೆ ಎಂದು ನಮಗೆ ಬಂದಿರತಕ್ಕ ವಿಷಯದ ಆಧಾರದಮೇಲೆ ನಾವು ಹೇಳುತ್ತೇವೆ. ಕೆಲವು ಮಂತ್ರಿಗಳೂ ಕೂಡ ಇದಕ್ಕೆ ಸಂಬಂಧಪಟ್ಟವರಿದ್ದಾರೆಂಬುದನ್ನೂ ನಾವು ಹೇಳುತ್ತೇವೆ. ಅದನ್ನು ಹೊರಗಡೆ ಹೇಳಿರುತ್ತೇವೆ. ಹೊರಗಡೆ ಹೇಳಿರುವುದನ್ನು ಈ ಸದನದಲ್ಲಿ ಹಕ್ಕುಚ್ಯುತಿಯಾಗುತ್ತದೆಂದರೆ ತಾವು ಅಧ್ಯಕ್ಷ ಸ್ಥಾನದಲ್ಲಿರತಕ್ಕವರು ನಮಗೆ ಎನ್‌ಲೈಟನ್ ಮಾಡಬೇಕು. ಯಾರ್ಯಾರೋ ಯಾರ್ಯಾರ ಬಗ್ಗೆಯೋ ಹೇಳುತ್ತಾರೆ. ಅದೆಲ್ಲಾ ಇಲ್ಲಿ ಹಕ್ಕುಚ್ಯುತಿ ಎಂದು ಆಗುವುದಾದರೆ ನಾವು ಹೊರಗಡೆ ಕೆಲಸಮಾಡುವುದಕ್ಕೆ ಕಷ್ಟವಾಗುತ್ತದೆ. ನಾವು ಅನೇಕ ಸಂದರ್ಭಗಳಲ್ಲಿ ಸಾಕ್ಷ್ಯಾಧಾರಗಳನ್ನೂ ಒದಗಿಸಬೇಕೆಂದು ಇದೆ. ಇವರು ಏನಾದರೂ ಅಕೃತ್ಯ ನಡೆಸುವವರು ಎಲ್ಲರ ಕಣ್ಣೆದುರಿಗೇ ನಡೆಸುವುದಿಲ್ಲ. ಎಲ್ಲರಿಗೂ ಗೊತ್ತಾಗುವಂತೆ ನಡೆಸುವುದಿಲ್ಲ. ಗುಟ್ಟಾಗಿ ನಡೆಸತಕ್ಕ ವ್ಯವಹಾರಗಳು ನಮಗೆ ಯಾವುದೋ ಸಂದರ್ಭದಲ್ಲಿ, ಯಾವುದೋ ರೀತಿಯಲ್ಲಿ ಗೊತ್ತಾಗುತ್ತವೆ. ಅದನ್ನು ನಾವು ಸಾರ್ವಜನಿಕ ಗಮನಕ್ಕೆ ತರಬೇಕಾಗುತ್ತದೆ. ಈ ಸದನದಲ್ಲಿಯೂ ಕೂಡ ಕೆಲವು ಸಂದರ್ಭಗಳಲ್ಲಿ ಚರ್ಚೆಯಾಗಬೇಕಾಗುತ್ತದೆ. ಆದ್ದರಿಂದ ಬ್ಲ್ಯಾಂಕೆಟ್ ಅಥವಾ ಬ್ಯಾನ್ ಹಾಕತಕ್ಕ ಪ್ರಯತ್ನ ಏನು ನಡೆಯುತ್ತಿದೆ ಇದು ಸರಿಯಲ್ಲ ಎಂದು ನನ್ನ ಭಾವನೆಯಾಗಿದೆ.

ಅಧ್ಯಕ್ಷರು:- ಬ್ಲ್ಯಾಂಕೆಟ್ಟು ಇಲ್ಲ, ಶಾಲೂ ಇಲ್ಲ.

ಶ್ರೀ ಅಜೀಜ್ ಸೇಠ್:- Sir,..

MR.SPEAKER. This is the privilege notice.

'With reference to certain statements which has been attributed to Mr.Yediyurappa'...

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ಪತ್ರಿಕೆಯಲ್ಲಿ ಏನು ಹೇಳಿಕೆಯನ್ನು ಕೊಟ್ಟಿದ್ದೇನೆ ಅದರ ಬಗ್ಗೆ ಈ ಸದನದಲ್ಲಿ ಸ್ಪಷ್ಟೀಕರಣ ನೀಡಿದ್ದೇನೆ. ದಾಖಲೆಗಳನ್ನು ಕೂಡ ನಾನು

ಕೊಡುತ್ತೇನೆಂದು ಹೇಳಿರತಕ್ಕದ್ದು ಇದೆ. ಸ್ವತಃ ಕಾಂಗ್ರೆಸ್ ಅಧ್ಯಕ್ಷರೇ ಅವರ ಬಗ್ಗೆ ಹೇಳಿರತಕ್ಕ ಹೇಳಿಕೆಗಳು ನೂರೆಂಟು ಪತ್ರಿಕಾ ಕಟಿಂಗ್ಸ್ ನನ್ನ ಹತ್ತಿರ ಇವೆ. ಅದನ್ನು ಬೇರೆ ರೀತಿಯಲ್ಲಿ ಇಲ್ಲಿ ಚರ್ಚೆಗೆ ತರುತ್ತೇನೆ ಆಗ ಚರ್ಚೆಮಾಡೋಣ. ಆದರೆ ಇಲ್ಲಿ ಹಕ್ಕುಚ್ಯುತಿ ಸಮಿತಿಗೆ ಕಳುಹಿಸಬೇಕೆಂಬ ಬಗ್ಗೆ ನಾನು ಸ್ಪಷ್ಟವಾಗಿ ಏನು ಹೇಳಿದ್ದೆ ಅದನ್ನು ತಮಗೆ ಲಿಖಿತ ಮೂಲಕ ಕೊಟ್ಟಿದ್ದೇನೆ. ಈ ಸದನದಲ್ಲಿಯೂ ಕೂಡ ಅದನ್ನು ಸ್ಪಷ್ಟಮಾಡಿದ್ದೇನೆ. ಇನ್ನುಳಿದಂಥ ವಿಷಯಗಳ ಬಗ್ಗೆ ಅನೇಕ ದಾಖಲೆಗಳು ಏನಿವೆ ಅದನ್ನು ಬೇರೆ ರೂಪದಲ್ಲಿ ಈ ಸದನದಲ್ಲಿ ನಾನು ತರುವವನಿದ್ದೇನೆ. ಆಗ ಚರ್ಚೆ ಮಾಡೋಣ. ಅದನ್ನು ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಿ.

SRI AZEEZ SAIT:- That is enough. He says, he has got certain evidences which he is going to bring them in different forms on the Floor of the House for discussion. Again further he says, that there are statements, counter statements, which he is going to prove. Sir, it is a well established fact; even the British Pariliament which we are practicing, sir, derogatory statements and humiliating statements are attracted to Privilege Motion. I only seek your protection for me and this should be referred to the Privileges Committee. Let the cat come out. If I am involved in such things, I am prepared to take any punsihment in this House.

MR.SPEAKER:- There is no cat.

SRI AZEEZ SAIT:- Let the cat come out. He again repeated in this very August House that he is going to bring it in a different form. He wants to escape from it. He wants to escape from the Privilege Motion.

MR.SPEAKER: He has come out in writing that whatever had appeared in Deccan Herald is not correct. So, what applies to what Deccan Herald has said, the same will apply to 'Star of Mysore', 'Queen of Mysore' and everything.

SRI AZEEZ SAIT:- Not the question of Deccan Herald. It has appeared even in 'The Hindu', the 'Times of India' and other papers also.

MR.SPEAKER:- It applies 'Hindu' and all other papers also. Mr. Ediyurappa, you disown, any such statement which has appeared in Deccan Herald and other newspapers?

SRI B.S. YEDIYURAPPA:- Yes Sir. Definitely.

MR.SPEAKER:- What else you want Mr. Sait? He says, it is not correct.

SRI AZEEZ SAIT:- Sir, this is not the justice meted out to me. Even now, he says, he has got evidence and he is going to bring it on the Floor of the House in a different form for discussion. He is scared of the Privilege Motion.

ಶ್ರೀ ಅಜೀಜ್ ಸೇಠ್:– ಅವರು ಈಗ ಹೇಳಿದರು. ತಾವು ಇದನ್ನು ತೆಗೆದುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾನು ಹೇಳಿದ್ದುದು ಬೇರೆ ವಿಷಯಗಳನ್ನು ತರುತ್ತೇವೆಂದು. ಅವರ ಬಗ್ಗೆ ಅನೇಕ ವಿಷಯಗಳಿವೆ; ನೋಟೀಸ್ ಕೊಟ್ಟು ಅದನ್ನು ತರುತ್ತೇನೆಂದು ನಾನು ಹೇಳಿದ್ದುದು. ಆದರೆ ಅದು ಈ ವಿಷಯಕ್ಕೆ ಸಂಬಂಧಪಟ್ಟುದ್ದುದು ಅಲ್ಲ. ಅದನ್ನು ಇಲ್ಲಿ ಯಾವ ಪದ್ಧತಿಯಲ್ಲಿ ತರಬೇಕೆಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಆದರೆ ಇದರ ಬಗ್ಗೆ ಅಲ್ಲ. ನಾನು ಕಾನೂನು ಚೌಕಟ್ಟಿನಲ್ಲಿ ಅದನ್ನು ಮಾಡುತ್ತೇನೆ.

MR.SPEAKER:- For argument sake Mr.Sait supposing I refer...

SRI AZEEZ SAIT:- Please allow me to make it clear. Just now on the floor of the House, he has repeated again to say that he has got something which he is going to bring it in a different form just to avoid from the Privilege Motion. Do you want that asperstion to come in? Let once and for all the matter be got cleared. Whe he has got that much of evidence, let him come out? He cannot take Privilege to get Scared himself. Even now he says he has got something which he is going to bring the same in a different form. What is that? Let him say what is that evidence he has got? Let it be overall cleared once for all. Let him tell now.

ಶ್ರೀ ಬಿ.ಎಸ್. ಯಡಿಯೂರಪ್ಪ:– ಅಧ್ಯಕ್ಷರೆ, ಈ ಸದನದ ನಿಯಮಾವಳಿಗಳ ಪ್ರಕಾರ ಅವರ ಬಗ್ಗೆ ಇಷ್ಟು ಇದೆ ನನ್ನ ಹತ್ತಿರ, ತರುತ್ತೇನೆ. ಚರ್ಚೆ ಮಾಡೋಣ. ತಾವು ರೂಲಿಂಗ್ ಕೊಡುವ ಅಧಿಕಾರ ಇದೆ, ಅದು ಬೇರೆ ರೂಪದಲ್ಲಿ ತರೋಣ. ಆದರೆ ಇವತ್ತು ಇದಕ್ಕೆ ಸೀಮಿತವಾಗಿ ನಾನು ಏನು ಹೇಳಿಕೆ ಕೊಟ್ಟಿದ್ದೇನೆ ಅದರ ಆಧಾರದ ಮೇಲೆ ತಾವು ತೀರ್ಮಾನ ತೆಗೆದುಕೊಳ್ಳುವಂಥ ಹಕ್ಕು ತಮಗೆ ಇದೆ. ತಾವು ತೀರ್ಮಾನ ತೆಗೆದುಕೊಳ್ಳಿ.

SRI AZEEZ SAIT:- What is that he has got about me? ಈಗಲೂ ನನ್ನ ಬಗ್ಗೆ ತೆಗೆದುಕೊಂಡು ಬರುತ್ತೇನೆ ಎಂದು ಹೇಳುತ್ತಿದ್ದಾರೆ. ಅವರು ತೆಗೆದುಕೊಂಡು ಬರಲಿ, ಈಗಲೇ ಅದು ಏನು ಎಂದು ಹೇಳಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಈಗಲೇ ಚರ್ಚೆಗೆ ಅವಕಾಶ ಮಾಡಿಕೊಡುವುದಾದರೆ ನಿಶ್ಚಿತವಾಗಿ ಅದನ್ನು ಚರ್ಚೆ ಮಾಡೋಣ.

SRI AZEEZ SAIT:- Let the Assembly take it.

ಶ್ರೀ ವಾಟಾಳ್ ನಾಗರಾಜ್:– ಹಕ್ಕುಚ್ಯುತಿಗೂ ಇದಕ್ಕೂ ಸಂಬಂಧ ಇಲ್ಲ. ಒಂದೊಂದು ಬೇರೆ ಬೇರೆ ವಿಷಯ.

SRI AZEEZ SAIT:- What is that Mr.Vatal Nagaraj you are talking about?

ಶ್ರೀ ವಾಟಾಳ್ ನಾಗರಾಜ್:– ತಾವು ಹಿರಿಯ ಸದಸ್ಯರು. ಇದರ ಬಗ್ಗೆ ಏಕೆ ಇಷ್ಟು ಕೋಪಿಸಿಕೊಳ್ಳುತ್ತೀರಿ. ಇವರು 40 ವರ್ಷಗಳ ಕಾಲ ಹೋರಾಟ ಮಾಡಿರತಕ್ಕಂಥ ಇತಿಹಾಸ ಇದೆ. ಇದು ಸಣ್ಣ ವಿಚಾರ, ಇದು ಹೊರಗಡೆ ಮಾತನಾಡಿರತಕ್ಕಂತಹ ವಿಚಾರ ಅದನ್ನು ಇಲ್ಲಿ ತಾವು ಹಕ್ಕುಚ್ಯುತಿಗೆ ತರುವುದಾದರೆ.....

ಶ್ರೀ ಅಜೀಜ್ ಸೇಠ್:– ಇದು ದೊಡ್ಡ ವಿಷಯ ಅಲ್ಲವೆ?

ಅಧ್ಯಕ್ಷರು:– ನಿಮ್ಮ ನೋಟೀಸ್‌ನಲ್ಲಿ ಏನು ಹೇಳಿದ್ದೀರಿ?

I hereby give Notice under Rule 191 seeking permission to raise the question of breach of privilege against Sri Yediyurappa. The Hon'ble Member has made a number of statements alleging that I was responsible for instigating violence in the city of Mysore. Since 8th December 92. He has further stated that he is prepared to prove my involvement before the Legislative Assembly. Clippings of the paper are enclosed herewith. Alright, Clippings are enclosed and his statement is there. Now with reference to that, he has said...

SRI AZEEZ SAIT:- Sir, to assist you, further he has said that I had taken shelter under Sri Veerappa Moily and gone out on tour.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು:- ಅವರು ಹೇಳಿ ಮುಗಿಸಲಿ.

SRI AZEEZ SAIT:- What did Mr.Veerappa Moily said?

(INTERRUPTIONS)

SRI AZEEZ SAIT:- Mr.Veerappa Moily said that Mr.Sait has not taken shelter. Mr.Veerappa Moily earlier also said that it is very unfortunate Mr.Yediyurappa's charges against Mr.Sait. Please go through all those press clippings.

MR.SPEAKER:- The utterances of the Hon'ble Member against me in the Press has prevented me to discharge my duties as member of this august House. My image in the public eye has been tarnished. So, now he has categorically denied ಮಾನ್ಯ ಅಜೀಜ್ ಸೇಠ್‌ರವರು ಇದಕ್ಕೆ ಜವಾಬ್ದಾರರೆಂದು ನಾನು ವೈಯುಕ್ತಿಕವಾಗಿ ಹೇಳಿಲ್ಲ. ದಿನಾಂಕ 8-12-92ರಂದು ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಇದು ಬಂದಿದೆ. ಪತ್ರಿಕೆಗಳಲ್ಲಿ ಬಂದಿರುವುದು ಎಂದು ಅಮೆಂಡ್‌ಮೆಂಟ್ ಮಾಡುವುದಕ್ಕೆ ನಿಮ್ಮ ಒಪ್ಪಿಗೆ ಇದೆ ತಾನೆ. ಪತ್ರಿಕೆಗಳಲ್ಲಿ ವರದಿಯಾಗಿರುವುದು ಸರಿಯಲ್ಲ. . . . So, it is an omnibus statement which he is making.

SRI AZEEZ SAIT:- I am helpless. I leave it to you. But I am not satisfied with what has been said. Having kicked me and asking sorry I do not take it as correct.

(INTERRUPTIONS)

ಅಧ್ಯಕ್ಷರು:- ಮಾನ್ಯ ಯಡಿಯೂರಪ್ಪನವರೆ, for having brought so much of mental anguish to one of our senior respected members of this House, don't you think you accept some regret also.

SRI B.S. YEDIYURAPPA:- No sir. I am sorry.

MR.SPEAKER:- Why Sir?

ಶ್ರೀ ಬಿ.ಎಸ್. ಯಡಿಯೂರಪ್ಪ:- ನಾನು ತಮಗೆ ಲಿಖಿತ ಮೂಲಕ ಕೊಟ್ಟಿದ್ದೇನೆ. ಅದರ ಆಧಾರದ ಮೇಲೆ ತಾವು ಏನು ತೀರ್ಪು ತೆಗೆದುಕೊಳ್ಳುತ್ತಿರೋ, ನಾನು ಅದಕ್ಕೆ ತಲೆ ಬಾಗುತ್ತೇನೆ. ತಾವು ತೀರ್ಮಾನ ತೆಗೆದುಕೊಳ್ಳಬಹುದು.

MR.SPEAKER:- Allright, I will reserve ruling on this.

ಗಮನ ಸೆಳೆಯುವ ಸೂಚನೆಗಳು

(1) ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿಶ್ವಬ್ಯಾಂಕ್ ನೆರವು ಸ್ಥಗಿತಗೊಂಡ ಬಗ್ಗೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಅಧ್ಯಕ್ಷರೆ, ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿಶ್ವಬ್ಯಾಂಕ್ ನೆರವು ಸ್ಥಗಿತಗೊಂಡ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ.

1. 791 ಕೋಟಿ ರೂ.ಗಳ ಅಂದಾಜು ವೆಚ್ಚದ ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ 2ನೆಯ ಹಂತಕ್ಕೆ ನೆರವು ನೀಡುವ ಬಗ್ಗೆ ವಿಶ್ವಬ್ಯಾಂಕಿನೊಡನೆ ಜೂನ್ 1989ರಲ್ಲಿ ಒಪ್ಪಂದವಾಯಿತು. ಈ ಒಪ್ಪಂದದ ಪ್ರಕಾರ ವಿಶ್ವಬ್ಯಾಂಕ್ ನೆರವಿನ ಮೊತ್ತ 325 ಮಿಲಿಯನ್ ಡಾಲರ್‌ಗಳು. ಈ ನೆರವು ಕೊನೆಗೊಳ್ಳುವ ದಿನಾಂಕ 31.12.1996 ಆಗಿರುತ್ತದೆ. 2ನೇ ಹಂತದ ಈ ಯೋಜನೆಯಿಂದ ಸುಮಾರು 1.45 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ.

2. ಡಾಲರ್ ಮತ್ತು ರೂಪಾಯಿನ ವಿನಿಮಯದಲ್ಲಿ ಆದ ವೆಚ್ಚ ಹೆಚ್ಚಳವನ್ನು ಗಮನಿಸಿ, ಕೇಂದ್ರ ಸರ್ಕಾರದ ಶಿಫಾರಸ್ಸಿನ ಮೇರೆಗೆ ಈ ಯೋಜನೆಯ ನೆರವಿನ ಮೊತ್ತದಲ್ಲಿ 80 ಮಿಲಿಯನ್ ಡಾಲರ್‌ಗಳನ್ನು 1991ರಲ್ಲಿ ಖೋತಾ ಮಾಡಲಾಯಿತು. ಇದರಿಂದಾಗಿ, ಹಾಲಿ ಇರುವ ನೆರವಿನ ಮೊತ್ತವು 245 ಮಿಲಿಯನ್ ಡಾಲರ್‌ಗಳಾಗಿರುತ್ತದೆ. ಈ ಕ್ರಮದಿಂದ ಯೋಜನೆಯ ಕಾಮಗಾರಿಗಳನ್ನು ಉದ್ದೇಶಿಸಿದಂತೆ ಕಾರ್ಯಗತಗೊಳಿಸುವುದಕ್ಕೆ ಧಕ್ಕೆ ಬರುವುದಿಲ್ಲವೆಂದು ಕೇಂದ್ರ ಸರ್ಕಾರ ಹಾಗೂ ವಿಶ್ವಬ್ಯಾಂಕಿನವರ ಅನಿಸಿಕೆಯಾಗಿದೆ.

3. ವಿಶ್ವಬ್ಯಾಂಕಿನವರ ಮಾರ್ಗ ಸೂಚಿಯ ಪ್ರಕಾರ ಈಗಾಗಲೇ ಕಾಮಗಾರಿಗಳನ್ನು ಪ್ರಾರಂಭ ಮಾಡಿದ್ದು ಅವುಗಳ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿರುತ್ತದೆ. 1989ರಲ್ಲಿ ಪ್ರಾರಂಭವಾದ ವಿಶ್ವಬ್ಯಾಂಕ್ ನೆರವಿನ ಈ ಯೋಜನೆಗೆ 1992ರ ನವೆಂಬರ್ ತಿಂಗಳ ಕೊನೆಯವರೆಗೆ ತಗುಲಿರುವ ವೆಚ್ಚ ಸುಮಾರು 184 ಕೋಟಿ ರೂ.ಗಳಾಗಿದ್ದು, ಸುಮಾರು 80 ಕೋಟಿ ರೂ.ಗಳ (ಸುಮಾರು 36 ಮಿಲಿಯನ್ ಡಾಲರ್‌ಗಳು) ಮರು ಪಾವತಿಯನ್ನು (Reimbursement) ಪಡೆಯಲಾಗಿದೆ.

4. ಯೋಜನೆಯಿಂದ ಭಾದಿತರಾದ ಜನರ ಪುನರ್‌ವಸತಿ ಹಾಗೂ ಪುನಶ್ಚೇತನ ಕಾರ್ಯಕ್ರಮವು ಈ ಯೋಜನೆಯ ಒಂದು ಪ್ರಮುಖ ಅಂಗವಾಗಿರುತ್ತದೆ. ವಿಶ್ವಬ್ಯಾಂಕಿನ ವೀಕ್ಷಕ ತಂಡದವರೊಡನೆ ಹಲವಾರು ಬಾರಿ ಚರ್ಚಿಸಿ ಪುನರ್‌ವಸತಿ ನೀತಿಯ ಬಗ್ಗೆ ಈಗಾಗಲೇ ಸರ್ಕಾರದಿಂದ ಆದೇಶಗಳನ್ನು ಹೊರಡಿಸಲಾಗಿದೆ. ಆದಾಗ್ಯೂ ಕೂಡ, ಯೋಜನಾ ಮಟ್ಟದಲ್ಲಿ ಪುನರ್‌ವಸತಿ ಕಾರ್ಯಕ್ರಮದ ಅನುಷ್ಠಾನದಲ್ಲಿ ವಿಳಂಬವಾಗಿರುತ್ತದೆ. ಪುನರ್‌ವಸತಿ ನೀತಿಯಲ್ಲಿ